# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 288 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 18.07.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದಿಂದ ಪರವಾನಗಿ ಪಡೆದಿರುವ ಮದ್ಯ ಮಾರಾಟ ಸನ್ನದುದಾರರ ಅಂಗಡಿಗಳಲ್ಲಿ ಮದ್ಯವನ್ನು ಖರೀದಿ ಮಾಡಿ ಸ್ವಿಗ್ಗಿ/ ಝುಮೊಟೋ ಮಾದರಿಯಲ್ಲಿ ಆನ್‌ಲೈನ್ ಮೂಲಕ ಗ್ರಾಹಕರು ತಮ್ಮ ಮನೆಗಳಿಗೆ ತರಿಸಿಕೊಳ್ಳಲು ಅನುಮತಿ ಇದೆಯೇ; ಇದ್ದಲ್ಲಿ, ಈ ರೀತಿ ಸೇವೆ ನೀಡಲು ಅಬಕಾರಿ ಕಾನೂನುಗಳಲ್ಲಿ ಅವಕಾಶಗಳಿವೆಯೇ; ಇಲ್ಲದಿದ್ದಲ್ಲಿ, ಇದ್ದಕ್ಕಿರುವ ಕಾನೂನು ತೊಡಕುಗಳೇನು; (ಆದೇಶಗಳ ಸಹಿತ ಸವಿವರವಾದ ಮಾಹಿತಿ ನೀಡುವುದು) | ಸರ್ಕಾರದಿಂದ ಪರವಾನಗಿ ಪಡೆದಿರುವ ಮದ್ಯ ಮಾರಾಟ ಸನ್ನದುದಾರರ ಅಂಗಡಿಗಳಲ್ಲಿ ಮದ್ಯವನ್ನು ಖರೀದಿ ಮಾಡಿ ಸ್ವಿಗ್ಗಿ / ಝುಮೊಟೋ ಮಾದರಿಯಲ್ಲಿ ಆನ್‌ಲೈನ್ ಮೂಲಕ ಗ್ರಾಹಕರು ತಮ್ಮ ಮನೆಗಳಿಗೆ ತರಿಸಿಕೊಳ್ಳಲು ಅನುಮತಿ ಇರುವುದಿಲ್ಲ.<br>ಆನ್‌ಲೈನ್‌ನಲ್ಲಿ ಮದ್ಯ ಸರಬರಾಜು ಮಾಡಲು ಅಬಕಾರಿ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. |
| ಆ | ಸರ್ಕಾರದಿಂದ ಪರವಾನಗಿ ಪಡೆದಿರುವ ಮದ್ಯ ಮಾರಾಟ ಸನ್ನದುದಾರರ ಅಂಗಡಿಗಳಲ್ಲಿಯೇ ಮದ್ಯವನ್ನು ಖರೀದಿ ಮಾಡಿ ಗ್ರಾಹಕರಿರುವ ಸ್ಥಳಕ್ಕೆ ತಲುಪಿಸುವುದರಿಂದ ಸರ್ಕಾರದ ಆದಾಯವು ಹೆಚ್ಚಾಗಿ, ಮದ್ಯ ಸೇವಿಸಿ ವಾಹನ ಚಾಲನೆ ಮಾಡಿ ಉಂಟಾಗುವ ಅಪಘಾತಗಳು ಸಹ ಕಡಿಮೆಯಾಗುವುದರಿಂದ ಈ ರೀತಿ ಸೇವೆಯನ್ನು ನೀಡಲು ಸರ್ಕಾರವು ಯಾವುದೇ ಅಡ್ಡಿಯನ್ನು ಉಂಟು ಮಾಡದಿರುವುದು ಒಳಿತಲ್ಲವೇ? (ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಆನ್‌ಲೈನ್ ಮೂಲಕ ಮದ್ಯ ಮಾರಾಟ ಹಾಗೂ ಮನೆಗಳಿಗೆ ಮದ್ಯವನ್ನು ಸರಬರಾಜು (Home Delivery) ಮಾಡುವ ವ್ಯವಸ್ಥೆಯನ್ನು ಸದ್ಯಕ್ಕೆ ಜಾರಿಗೊಳಿಸುವುದು ಸಮಂಜಸವಾಗಿರುವುದಿಲ್ಲವೆಂದು ಸರ್ಕಾರವು ತೀರ್ಮಾನ ತೆಗೆದುಕೊಂಡಿರುತ್ತದೆ. |

ಆಇ 59 ಇಎಲ್‌ಕ್ಯೂ 2024

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು